ಎಸೆದು ಹೋಗ್ತಾರಂತೆ. ಈ ಮಾಟಮಂತ್ರ ಮಾಡೋರು, ನಿಧಿ ಅಗೆಯೋರು ಹುಡುಕಿಸಿ ಎಳೆ ಮಕ್ಕಳನ್ನೇ ಕಿಡ್ನಾಪ್ ಮಾಡ್ತಾರಂತೆ! ಪ್ರಜ್ಞೆ ತಪ್ಪಿಸೋ ಔಷಧಿ ರೆಡಿ ಇಟ್ಕೊಂಡು ಇರ್ತಾರಂತೆ. ಗೋಣಿಚೀಲದಲ್ಲಿ ಅವುಚಿ ತಗೊಂಡ್ಹೋದ್ರೆ ಯಾರಿಗೆ ಗೊತ್ತಾಗುತ್ತೆ ಹೇಳಿ. ಹೆತ್ತವರು ಹುಶಾರಾಗಿರಬೇಕು! ಈ ಮಗೂನೂ ಹಂಗೆ ಆಗಿದೆಯೋ ಏನೋ" ಎಂದು ಭವಿಷ್ಯವನ್ನೂ ನುಡಿದುಬಿಟ್ಟರು.

ಜನ ಇನ್ನೊಬ್ಬರ ಸಮಸ್ಯೆ ಅಂದರೆ ಹೀಗೇ ಬೇಕಾಬಿಟ್ಟಿ ಮಾತಾಡುತ್ತಾರೆ. ತಮ್ಮೊಳಗೆ ತುಂಬಿಕೊಂಡಿರುವ ಭಯ, ಸಣ್ಣತನ, ದೌರ್ಬಲ್ಯ, ಮೂಢನಂಬಿಕೆ, ಭ್ರಮೆಗಳನ್ನು ಕಾರಿಕೊಳ್ಳುವ ಚಟ. ಇಂಥ ಆಘಾತಕಾರಿ ಮಾತುಗಳು ನೊಂದವರ ಮನಸ್ಸಿನ ಮೇಲೆ ಯಾವ ಪರಿಣಾಮ ಬೀರಬಹುದೆಂಬ ಸಣ್ಣ ಕಾಳಜಿಯೂ ಅವರಲ್ಲಿರುವುದಿಲ್ಲ. ನನಗಂತೂ ಜ್ವಾಲಾಮುಖಿಯಂತೆ ಸಿಡಿದು "ಮಗೂನ ಏನಾದ್ರೂ ನೋಡಿದಿರೋ ಇಲ್ಲವೋ ಅಷ್ಟು ಹೇಳ್ರಿ ಸಾಕು. ಸುಖಾಸುಮ್ಮನೆ ಇಲ್ದಿರೋ ಸುಡುಗಾಡು ಕತೆಗಳೆಲ್ಲಾ ಹುಟ್ಟುಹಾಕಿ ಜೀವ ತೆಗೀಬ್ಯಾಡಿ" ಎಂದು ಎಲ್ಲರಿಗೂ ಉಗಿಯಬೇಕೆನಿಸಿತು. ಆದರೆ ಜನರ ಸಂತೆಯಲ್ಲಿ ಇಂಥದ್ದೆಲ್ಲಾ ಮಾಡಲು ಅದೆಲ್ಲಿ ಸಾಧ್ಯ?

ಬೀದಿಯ ಜನರಿಗೆ ನಾನು ಪಾಪು ಕಳಕೊಂಡ ಸುದ್ದಿಯೇ ಒಂದು ರೋಚಕ ವಿಷಯವಾಗಿತ್ತು. ನನಗಂತೂ ಬೀದಿಯಲ್ಲಿ ಕಾಣುವ ಮಕ್ಕಳೆಲ್ಲಾ ನನ್ನ ಮಗಳಂತೆಯೇ ಕಾಣತೊಡಗಿದ್ದರು. ಜನರ ಪ್ರಶ್ನೆಗಳಿಗೆ ಉತ್ತರಿಸುವ ತಾಳ್ಮೆ ಹೊರಟು ಹೋಗಿತ್ತು. ಸಿಕ್ಕವರ ಬಳಿ ವಿಚಾರಿಸುವ ಕೆಲಸ ಕೈಬಿಟ್ಟು ಮತ್ತೊಮ್ಮೆ ಮನೆ ಕಡೆ ಹೊರಟೆ. ಅವಳು ಈಗಾದರೂ ಅಲ್ಲಿಗೆ ಬಂದಿರಬಹುದೆ? ಯಾರಾದರೂ ಪುಣ್ಯಾತ್ಮರು ವಿಳಾಸ ತಿಳಿದು ತಲುಪಿಸಿರಬಹುದು! ಆದರೆ ಪಾಪೂಗೆ ಮನೆ ವಿಳಾಸ ಹೇಳುವುದು ಎಲ್ಲಿ ಬರುತ್ತದೆ. ಅವಳಿನ್ನೂ ಚಿಕ್ಕವಳು. ಹೆಚ್ಚೆಂದರೆ ನನ್ನ ಹೆಸರು, ಅವಳ ತಾಯಿಯ ಹೆಸರು ಉದ್ಯೋಗಗಳ ಬಗ್ಗೆ ಹೇಳಬಲ್ಲಳು. ನನ್ನ ಹೆಸರು ಹೇಳಿದರೂ ಯಾರಿಗೂ ಗೊತ್ತಿಲ್ಲದ ವ್ಯಕ್ತಿ ನಾನು.

ಸೂಫಿ ಎಲ್ಲೂ ಸಿಗದೆ ನಿರಾಶನಾಗಿ ಮನೆ ಕಡೆ ಹೊರಟ್ಟಿದ್ದೆ. ಮೊದಲು ಮಾವ ಸಿಕ್ಕರು. "ಪೊಲೀಸ್ ಸ್ಟೇಶನ್ ಎಲ್ಲಿದೆ? ಕಂಪ್ಲೇಟ್ ಕೊಡೋಣ ನಡೀರಿ" ಎಂದು ನನ್ನ ಹೊರಳಿಸುತ್ತಿದ್ದರು. ಅಷ್ಟರಲ್ಲಾಗಲೇ ಮಗಳು ಕಾಣೆಯಾಗಿ ಒಂದು ಗಂಟೆ ಮೇಲಾಗಿತ್ತು. ನೋಡಿದರೆ ನಮ್ಮ ಬೀದಿಯ ಕಡೆಯಿಂದ ಜನರು ಸಣ್ಣಗುಂಪಾಗಿ ನನ್ನ ಕಡೆಗೇ ವೇಗವಾಗಿ ಬರುತ್ತಿದ್ದರು. ಮುಂದೆ ಕೂದಲು ಕೆದರಿಕೊಂಡು ಗೋಳಾಡುತ್ತಾ ಬರುವ ನನ್ನ ಹೆಂಡತಿಯನ್ನು ಕಂಡು ಹೆದರಿಕೆಯಾಯಿತು. ಅಷ್ಟರಲ್ಲೇ ನಮ್ಮ ನಡುವಿನಿಂದ ಒಂದು ಆಟೊ ಚಲಿಸಿ ಹೋಗುತ್ತಿತ್ತು. ಅದರೊಳಗಿಂದ ತಲೆ ಹೊರ ಹಾಕಿದ ಮಗಳು, "ಮಮ್ಮೀ... ಪಪ್ಪಾ..." ಎಂದು ಕೂಗಿದಳು. ಆಟೊ ಗಕ್ಕನೆ ನಿಂತಿತು. ಹದ್ದಿನಂತೆ ಹಾರಿ ಹೋದ ನನ್ನ ಹೆಂಡತಿ ಮಗಳನ್ನು ಸೆಳೆದು ಅವುಚಿಕೊಂಡಳು. ಸೂಫಿ ಆರಾಮಾಗಿದ್ದಳು.

ಆಟೊ ಡ್ರೈವರ್ ಮಗುವಿನ ತಂದೆ ನಾನೇ ಎಂದು ಖಚಿತವಾಗುತ್ತಲೇ ರಾಗ ಎಳೆಯುತ್ತಾ ಗುಂಪು ಸೀಳಿ ಬಂದ. "ಏನ್ ಸರ್ ನಿಮ್ದು ಬೇಜವಾಬ್ದಾರಿ. ಹಿಂಗೆ ಮಗೂನ ಒಂಟಿಗೆ ಬಿಟ್ಬಿಟ್ಟಿ ಗೆಟಿನ್ ಆಗ್ಬಿಟ್ರೆ ಹೆಂಗೆ ಹೇಳಿ. ಗ್ನಾನಾಗೆ ಇಲ್ಲ ನಿಮ್ಗೆ. ನಾನ್ ನೋಡ್ಬಿಟ್ಟಿ ಕರ್ಕೊಂಡು ಬಂದಿದ್ದು ನಿಮ್ದು ನಸೀಬ್. ಬ್ಯಾರೆ ಯಾರ್ದಾನ ಕೈಗೆ ಬಚ್ಚೀ ಸಿಕ್ಕಾಕ್ಕೊಂಡಿ ಹೆಚ್ಚೂ ಕಮ್ಮೀಗೆ ಆಗಿದ್ರೆ ಏನಾಗ್ತಿತ್ತು ಗೊತ್ತು ನಿಮ್ಗೆ. ಗ್ರಾಚಾರ ಒಂದೇ ಸಮ್ನಾ ಇರಾದಿಲ್ಲ ಸಾಮಿ. ನಾ ಇರೋ ಬರೋ ಬಾಡಿಗೇನೆಲ್ಲಾ ಬಿಸಾಕ್ಬಿಟ್ಟಿ ಮಗೀಗೆ ಚಾಕ್ಲೇಟ್, ಬಿಸ್ಕತ್, ಚಕ್ಲಿ ಕೊಡಿಸಿ ಮೆಂಟೈನ್ ಮಾಡ್ದೆ ಗೊತ್ತಾ! ಹುಡ್ಗೀಗೆ ಮಾತಾಡ್ಸಿ ಮಾತಾಡ್ಸಿ ಕ್ಲೋಸ್ ಫ್ರೆಂಡ್ಶಿಫ್ ಮಾಡ್ಕೊಂಡಿ ಪಾಪು ಹೇಳಿದ ಗಲ್ಲಿ ಮೊಹಲ್ಲಾ ಎಲ್ಲಾ ಸುತ್ಬಿಟ್ಟಿ ಎಲ್ಲಾ ಪೆಟ್ರೋಲ್ಗೆ ಖಲಾಸ್ ಆಯ್ತು. ಇವತ್ತು ದಿನಾನೇ ಫುಲ್ ಲಾಸ್ ಗೊತ್ತಾ" ಎಂದು ಕೊರೆಯತೊಡಗಿದ. ಮಗುವನ್ನು ತಾನೇ ಉಳಿಸಿದವನು ಎಂದು ಅವನು ಹೇಳಿಕೊಳ್ಳಬೇಕಿತ್ತು. ಅದಕ್ಕಾಗಿ ಸುರಿಸಿದ ಬೆವರು, ಖರ್ಚಾದ ಬಂಡವಾಳ, ತೋರಿದ ಸಾಹಸ ಎಲ್ಲವನ್ನೂ ಆತ ಒದರಬೇಕಿತ್ತು. ಇದಕ್ಕವನು